**ಸಾಕ್ಷಿಯನ್ನು ದಿಃ26.11.2019 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಜೆ.ಪಿ ವಕೀಲರಿಂದಃ**

ಈ ದಾವೆಯನ್ನು ವಾದಿಯು ಕುಮಾರ್ ಎಂಬುವವರ ವಿರುದ್ಧ ದಾಖಲಿಸಿರುತ್ತಾರೆ. ದಾವೆಯ ಸ್ವತ್ತು ನಿವೇಶನಕ್ಕೋಸ್ಕರ ದಾವೆಯನ್ನೂಡಿರುತ್ತಾರೆ. 3 ನೇ ಪ್ರತಿವಾದಿಯನ್ನು ನಾನು ನೋಡಿರುತ್ತೇನೆ, ನಾನು ಸಹಾ 3 ನೇ ಪ್ರತಿವಾದಿ ವಾಸವಿರುವ ಸಮೀಪದಲ್ಲಿ ವಾಸವಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಗಳು ನನಗೆ ಗೊತ್ತು. 1 ಮತ್ತು 2 ನೇ ಪ್ರತಿವಾದಿಗಳು ಅವರಿಗೆ ಸೇರಿದ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಿರುತ್ತಾರೆ ಎಂದರೆ ಸಾಕ್ಷಿಯು ಹೆಚ್ಚಿನ ಜಾಗದಲ್ಲಿ ಕಟ್ಟಡವನ್ನು ಕಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ವಾದಿಯು ನನಗೆ ಪರಿಚಯ ಇರುವ ಕಾರಣ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ಮತ್ತು 2 ನೇ ಪ್ರತಿವಾದಿಯರು ಅವರಿಗೆ ಸಂಬಂಧಪಟ್ಟ ಸ್ವತ್ತಿನಲ್ಲಿ ಕಾನೂನುಬದ್ದವಾಗಿ ಪರವಾನಗಿಯನ್ನು ಪಡೆದು ಅವರ ಸ್ವತ್ತಿನಲ್ಲಿಯೇ ಮನೆಯನ್ನು ಕಟ್ಟಿಕೊಂಡು ವಾಸವಿರುತ್ತಾರೆ ಎಂದರೆ

ಸರಿಯಲ್ಲ. ದಾವೆಯ ವಿಷಯ ನನಗೆ ಏನು ಗೊತ್ತಿಲ್ಲದೇ ಇದ್ದರೂ ಕೂಡ ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಎ.ಸಿ. ದಯಾನಂದ ಮೂರ್ತಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
ಬಂಗಾರಪೇಟೆ